117 (243) ಶ್ರೀ ಶಿವಶಂಕರ್‌ರೆಡ್ಡಿ ಎನ್.ಹೆಚ್. (ಗೌರಿಬಿದನೂರು) (ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣಾ ನೀರಿ ಸರಬರಾಜು ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಗ್ರಾಮ ಪಂಚಾಯತಿಗಳಲ್ಲಿ ಕುಡಿಯುವ ನೀರಿನ ಬೊರ್‌ವೆಲ್‌ಗಳ ವಿದ್ಯುಚ್ಛಕ್ತಿಗೆ ವಾಣಿಜ್ಯ ತರಿಗೆ ರೂಪದಲ್ಲಿ ವಿಧಿಸುತ್ತಿರುವುದರಿಂದ ಗ್ರಾಮ ಪಂಚಾಯತಿಗಳಿಗೆ ಹೆಚ್ಚಿನ ಹೊರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಈ ಶುಲ್ಕ ಕಡಿಮೆ ಮಾಡಿ ರೈತರ ಪಂಪ್ ಸೆಟ್ಟುಗಳಿಗೆ ವಿಧಿಸುವ ಅನುಪಾತದಲ್ಲಿ ವಿಧಿಸಲು ಸಾಧ್ಯವಿಲ್ಲವೇ;

ಇ. ಇದರ ಬಗ್ಗೆ ಸರ್ಕಾರ ಕೈಗೊಳ್ಳುವ ಮುಂದಿನ ಕ್ರಮವೇನು?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು) :

ಬಂದಿದೆ.

ವಿದ್ಯುತ್‌ದರ ನಿಗದಿ ಮಾಡುವ ಅಧಿಕಾರ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಇರುತ್ತದೆ.

118 (248) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) (ಮಾನ್ಯ ಕೃಷಿ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟು ಉತ್ತರಿಸುವರೇ?

ಅ) ಸೋಯಾಅವರೆ, ಒಣಮೆಣಸಿನಕಾಯಿ ಹಾಗೂ ಗೋವಿನ ಜೋಳಕ್ಕೆ ಬೆಳೆ ವಿಮೆ ಯೋಜನೆ ಅಡಿಯಲ್ಲಿ ಸೇರಿಸದಿರಲು ಕಾರಣಗಳೇನು;

ಆ) 2003–04ನೇ ಸಾಲಿನಲ್ಲಿ ಶೇಂಗಾ ಮತ್ತು ಹೆಸರು ಬೆಳೆಗಳಿಗೆ ಬೆಳೆ ವಿಮೆ ನೀಡುವಲ್ಲಿ ತಾರತಮ್ಯವಾಗಿರುವುದು ಮತ್ತು ಬೆಳೆ ವಿಮೆ (premium) ಭರಣಾ ಮಾಡಿದ ರೈತರಿಗೆ ಸರಿಯಾಗಿ ಬೆಳೆ ವಿಮೆ ಬಿಡುಗಡೆಯಾಗದೇ ಇರುವುದು, ಸರ್ಕಾರದ ಗಮನದಲ್ಲಿದೆಯೇ;

ಇ) 2003–04ನೇ ಸಾಲಿನಲ್ಲಿ ಬಂಕಾಪುರ ಹೋಬಳಿ ಅರೇ ಮಲೆನಾಡಿನಲ್ಲಿ ಬರತಕ್ಕ ಗ್ರಾಮಗಳಾದ ನಿಡಗುಂದಿ, ಹುಲಿಕಟ್ಟಿ ಹುಣಶಿಕಟ್ಟಿ, ಮಲ್ಲನಾಯಕನಕೊಪ್ಪ ಗ್ರಾಮಗಳು ಕಂದಾಯ ದಾಖಲೆಗಳಲ್ಲಿ ಭತ್ತ ಬೆಳೆಯುವ ಕ್ಷೇತ್ರವೆಂದು ದಾಖಲೆ ಇದ್ದರೂ ಸಹ, ಅನಿಯಮಿತ (Random) ಸರ್ವೆ ನಂಬರಗಳನ್ನು ಆಯ್ಕೆ ಮಾಡುವಾಗ ಗಣನೆಗೆ ತೆಗೆದುಕೊಳ್ಳದಿರಲು ಕಾರಣವೇನು;

ಈ) ಬಂಕಾಪುರ, ಕುಂದೂರ, ಬಿಸನಳ್ಳಿ ಗ್ರಾಮಗಳಲ್ಲಿ ಗಣನೀಯ ಪ್ರಮಾಣದಲ್ಲಿ ಶೇಂಗಾ ಬೆಳೆಯುವ ಕ್ಷೇತ್ರಾವಾಗಿದ್ದರೂ ಅದನ್ನು ಬಿಟ್ಟು ಅರೆಮಲೆನಾಡು ಪ್ರದೇಶಗಳಲ್ಲಿ ಬರುವ ಗ್ರಾಮಗಳಲ್ಲಿ ಶೇಂಗಾ ಬೆಳೆಯುವ ಆಣೇವಾರಿ (Crop yield) ತೆಗೆದು ಸಂಪೂರ್ಣ ಬಂಕಾಪೂರ ಹೋಬಳಿಯ ರೈತರಿಗೆ ಶೇಂಗಾ ಬೆಳೆವಿಮೆ ಬಿಡುಗಡೆ ಮಾಡದೇ ಇರುವುದರಿಂದ ರೈತರು ವಂಚಿತರಾಗಿರುವುದು ಸರಕಾರದ ಗಮನದಲಲಿದೆಯೇ